ಓಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ. ಈ ವಿಚಾರವನ್ನು ಮಾನ್ಯ ಸದಸ್ಯರು ಮತ್ತೊಮ್ಮೆ ನನಗೆ ಜ್ಞಾಪಕ ಮಾಡಬೇಕು. ಎರಡನೆಯದಾಗಿ, ಡಬಲ್ ಡೋರ್ ಬಸ್ಸುಗಳನ್ನು ನಾವು ರಾಷ್ಟ್ರೀಕರಣ ಆಗಿರತಕ್ಕಂಥ ಪ್ರದೇಶಗಳಿಗೆ ಮಾತ್ರ ಕೊಡುತ್ತೇವೆಯೇ ಹೊರತು ಇಂಥ ಪ್ರದೇಶಗಳಿಗೆ ಇದುವರೆವಿಗೂ ಕೊಟ್ಟಿಲ್ಲ. ಕೊಡತಕ್ಕಂಥ ಸಾಧ್ಯತೆ ಇದ್ದರೆ ಅದನ್ನೂ ಸಹ ನಾನು ಆ ಸಭೆಯಲ್ಲಿ ಪರಿಶೀಲನೆ ಮಾಡುತ್ತೇನೆ. ಕುಣಿಗಲ್ ಮೂಲಕ ಹೋಗತಕ್ಕಂಥ ಕೆಲವು ಬಸ್ಸುಗಳನ್ನು ನೆಲಮಂಗಲ ಕುಣಿಗಲ್ ಆದ ನಂತರ ಮಾಗಡಿ ಮೂಲಕ ಓಡಿಸಬೇಕೆಂದು ಹೇಳಿದ್ದಾರೆ. ಇದಲ್ಲದೇ ಬಹಳ ಜನ ಈ ವಿಚಾರವಾಗಿ ಸಲಹೆ ಕೂಡ ಕೊಟ್ಟಿದ್ದಾರೆ. ವಿದ್ಯಾರ್ಥಿಗಳು ನನ್ನ ಹತ್ತಿರ ಬಂದು ಈ ಸಲಹೆಯನ್ನು ಕೊಟ್ಟಿದ್ದಾರೆ, ಇದನ್ನೂ ಸಹಿತ ಆ ದಿವಸದ ಸಭೆಯಲ್ಲಿ ಪರಿಶೀಲನೆ ಮಾಡುತ್ತೇನೆ.

ಶ್ರೀ ಹೆಚ್.ಸಿ. ಬಾಲಕೃಷ್ಣ : ಕೆಲವು ಬಿಟಿಎಸ್ ಬಸ್ಸುಗಳನ್ನು ಈಗಾಗಲೇ ಓಡಿಸುತ್ತಿದ್ದಾರೆ, ಆದರೆ ಈ ಆಷಾಢದಲ್ಲಿ ಒಂದು ತಿಂಗಳು ಬಸ್ಸುಗಳನ್ನು ಓಡಿಸಿ ಅದರ ಆದಾಯವನ್ನು ಸರ್ಕಾರಕ್ಕೆ ಕೊಡುತ್ತಾರೆ. ಆಷಾಢದಲ್ಲಿ ನೀವು ಬಸ್ಸುಗಳನ್ನು ಓಡಿಸಿರುವುದರಿಂದ ಅಷ್ಟಾಗಿ ಆದಾಯ ಬರುವುದಿಲ್ಲ ಆ ವರದಿಯನ್ನೇ ಆಧಾರವಾಗಿಟ್ಟುಕೊಂಡು ಬಸ್ಸುಗಳನ್ನು ಮುಂದೆ ಹಾಕುವಂಥ ವ್ಯವಸ್ಥೆ ಆಗುವುದು ಬೇಡ ಎಂದು ನಾನು ಮಂತ್ರಿಗಳಲ್ಲಿ ಮನವಿ ಮಾಡಿಕೊಳ್ಳುತ್ತೇನೆ, ಜೊತೆಗೆ ಡಬಲ್ ಡೋರ್ ಬಸ್ಸುಗಳ ವಿಚಾರದಲ್ಲಿ ನನಗೆ ಮಂತ್ರಿಗಳು ಈ ಸದನದಲ್ಲಿ ಕೊಡುತ್ತೇವೆಂದು ಆಶ್ವಾಸನೆ ಕೊಟ್ಟಿದ್ದರು, ಅದನ್ನು ತಾವು ದಯಮಾಡಿ ಕನ್ಸಿಡರ್ ಮಾಡಬೇಕೆಂದು ನಾನು ತಮ್ಮಮುಖಾಂತರ ಮನವಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು : ಉತ್ತರ ನಾನೇ ಹೇಳಿಬಿಡುತ್ತೇನೆ, ಸಮಯ ಮುಗಿದು ಹೋಗುತ್ತದೆ. ಇನ್ನು ಏನು ಆಷಾಢ ನಾಳೆಗೆ ಮುಗಿದು ಹೋಗುತ್ತದೆ, ಡಬಲ್ ಡೋರ್ ಬಸ್ಸುಗಳನ್ನು ಕೊಡಬೇಕೆಂದು ಹೇಳಿದ್ದೀರಿ, ಅದರ ಬಗ್ಗೆ ಆಲೋಚನೆ ಮಾಡುತ್ತೇನೆಂದು ಹೇಳಿದ್ದಾರೆ.

ಶ್ರೀ ಹೆಚ್.ಸಿ. ಬಾಲಕೃಷ್ಣ : ಅಧ್ಯಕ್ಷರೆ, ಅದೇ ವರದಿಯನ್ನು ಆಧಾರವಾಗಿಟ್ಟು ಕೊಂಡು ಅಧಿಕಾರಿಗಳು ಬಸ್ಸುಗಳನ್ನು ಮುಂದೆ ಹಾಕುವಂಥ ವ್ಯವಸ್ಥೆ ಮಾಡಿದರೆ ಹೇಗೆ?

ಅಧ್ಯಕ್ಷರು : ನೋಡಿ ಕೆಎಸ್ಆರ್‌ಟಿಸಿಯವರಿಗೆ ವರ್ಷ ಪೂರ್ತಿ ಶ್ರಾವಣ ಎಂದೇ ಪರಿಗಣಿಸಬೇಕು ಎಂದು ನಾವು ಆದೇಶ ಕೊಟ್ಟಿದ್ದೇವೆ.

ಶಿರಾ ತಾಲ್ಲೂಕಿನಲ್ಲಿ ತೆಂಗು ಅಭಿವೃದ್ಧಿ ಮಂಡಳಿಯಲ್ಲಿ ಸಹಾಯ ಧನದ ದುರುಪಯೋಗ.

287 - ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ 3 ವರ್ಷದಿಂದ ಶಿರಾ ತಾಲ್ಲೂಕಿನಲ್ಲಿ ತೋಟಗಾರಿಕಾ ಅಧಿಕಾರಿಗಳು ತೆಂಗು ಅಭಿವೃದ್ಧಿ ಮಂಡಳಿಗೆ ಸಹಾಯ ಧನಕ್ಕಾಗಿ ಶಿಫಾರಸ್ಸು ಮಾಡಿ ಕಳುಹಿಸಿರುವ ಫಲಾನುಭವಿಗಳೆಷ್ಟು? (ಫಲಾನುಭವಿಗಳ ವಿವರ ನೀಡುವುದು)

ಅ) *ಫಲಾನುಭವಿಗಳನ್ನಾಗಿ ಶಿಫಾರಸ್ಸು ಮಾಡುವಲ್ಲಿ ಏನಾದರೂ ನೀತಿ ನಿಯಮ ಹಾಗೂ ಮಾರ್ಗಸೂಚಿ ಇದೆಯೇ? ಹಾಗಿದ್ದಲ್ಲಿ ಅವು ಯಾವುವು?*

ಇ) *ಫಲಾನುಭವಿಗಳ ಶಿಫಾರಸ್ಸಿನಲ್ಲಿ ಸಾಕಷ್ಟು ಅವ್ಯವಹಾರವಾಗಿದ್ದು, ಅನೇಕ ಹಿಡುವಳಿದಾರರಲ್ಲದ ಬೇನಾಮಿ ಅರ್ಜಿಗಳನ್ನು ನೀತಿ ನಿಯಮಗಳನ್ನು ಮೀರಿ ಶಿಫಾರಸ್ಸು ಮಾಡಿ ಲಕ್ಷಾಂತರ ರೂಪಾಯಿ ವಂಚಿಸಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರವು ಕೈಗೊಂಡ ಕ್ರಮವೇನು?*

ಶ್ರೀ ಡಿ.ಟಿ. ಜಯಕುಮಾರ್ (ತೋಟಗಾರಿಕೆ ರಾಜ್ಯ ಸಚಿವರು) :

ಅ) 1) 94-95 ರಲ್ಲಿ 89 ಅರ್ಜಿ
2) 95-96 ರಲ್ಲಿ 57 ಅರ್ಜಿ
3) 96-97 ರಲ್ಲಿ 18 ಅರ್ಜಿ

} ಫಲಾನುಭವಿಗಳ ಸಂಖ್ಯೆ 164.

ಹೊಸ ತೋಟ ನಿರ್ಮಾಣ ಮತ್ತು ನಿರ್ವಹಣೆಗಾಗಿ ರೂ.3000 ಗಳನ್ನು ಸಹಾಯಧನವಾಗಿ ನೀಡಲಾಗುತ್ತಿದೆ. (ಪ್ರತಿ ಹೆಕ್ಟೇರ್‌ಗೆ)

ಆ) ಮಾರ್ಗ ಸೂಚಿ ಇದೆ. ಒಬ್ಬ ಫಲಾನುಭವಿಗೆ ಗರಿಷ್ಠ 300 ತೆಂಗಿನ ಸಸಿ, ಕನಿಷ್ಠ 30 ಸಸಿ ನಾಟಿ ಮಾಡಿದ ಪ್ರಾರಂಭದಲ್ಲಿ ಪ್ರತಿ ಗಿಡಕ್ಕೆ ರೂ. 40 ರಂತೆ ಸಹಾಯಧನವನ್ನು 3 ಕಂತುಗಳಲ್ಲಿ ವಿತರಿಸುವುದು.

ಇ) ಪ್ರಶ್ನೆ ಉದ್ಭವಿಸದು.

1994-95 ನೇ ಸಾಲಿನಲ್ಲಿ ತೆಂಗು ಅಭಿವೃದ್ಧಿ ಮಂಡಳಿಗೆ ಶಿಫಾರಸ್ಸು ಮಡಿದ ಫಲಾನುಭವಿಗಳ ಪಟ್ಟಿ :

ಕ್ರ.ಸಂ.	ರೈತರ ಹೆಸರು ಮತ್ತು ವಿಳಾಸ	ಸರ್ವೆ ನಂ.	ವಿಸ್ತೀರ್ಣ	ಗಿಡಗಳ ಸಂ.
1	2	3	4	5
1.	ಮಲ್ಲಯ್ಯ ಬಿನ್. ರಂಗಪ್ಪ, ಹೂವಿನಾಳು ಕುಂಟೇಗೌಡನಪಾಳ್ಯ, ಶಿರಾ ತಾ:	70:2	1.00	60
2.	ಸಿ. ಸುಮಿತ್ರಮ್ಮ ಕೊಂ.ಲೇ.ಬಿ.ವಿ.ಚಂದ್ರಶೇಖರಯ್ಯ ಬುಕ್ಕಾಪಟ್ಟಣ, ಶಿರಾ	55	"	"
3.	ಈಶ್ವರಪ್ಪ ಬಿನ್ ಬೈರಶೆಟ್ಟ ಗಿಡ್ಡನಹಳ್ಳಿ, ಶೌಖದಡಿ ಅಂಚೆ, ಶಿರಾ ತಾ:	53	3.20	200

1	2	3	4	5
4.	ಟಿ. ರಾಮಕೃಷ್ಣಪ್ಪ ಬಿನ್. ತಿಮ್ಮೇಗೌಡ, ಕರೆತಿಮ್ಮನಹಳ್ಳಿ ಚಿಕ್ಕಬಾಣಗೆರೆ ಅಂಚೆ	58:59	5.00	300
5.	ಗೋವಿಂದಪ್ಪ ಬಿನ್. ತಿಮ್ಮೇಗೌಡ, ಕರೆತಿಮ್ಮನಹಳ್ಳಿ	56:57	5.00	300
6.	ಈರಣ್ಣ ಬಿನ್. ಹನುಮಂತಪ್ಪ, ದೊಡ್ಡಬಾಣಗೆರೆ, ದೊಡ್ಡಬಾಣಗೆರೆ ಅಂಚೆ, ಶಿರಾ ತಾ:	10	5.00	300
7.	ಈರಯ್ಯ ಬಿನ್. ಹನುಮಂತಪ್ಪ ಚಿಕ್ಕಹುಲಿಕುಂಟೆ, ಹುಲಿಕುಂಟೆ ಅಂಚೆ, ಶಿರಾ ತಾ:	35:1	5.00	300
8.	ಸಿ.ಅಪ್ಪಣ್ಣ, ಬಿನ್.ಚಿನ್ನಪ್ಪ, ಸಿಡಗಟ್ಟ, ಹುಲಕುಂಟೆ ಅಂಚೆ, ಶಿರಾ ತಾ:	24:1 24:3	5.00	300
9.	ಎನ್.ಕರಿಯಣ್ಣ ಬಿನ್. ಹುಲಿಕುಂಟೆ, ಕನಕ ನಿಲಯ, ಹುಲಿಕುಂಟೆ, ಶಿರಾ ತಾ	58	5.00	
10.	ಡಿ. ಶಿವಣ್ಣ, ದಾಸಪ್ಪ, ಹಾಲೇನಹಳ್ಳಿ (ಅಂಚೆ) ಶಿರಾ ತಾ:	250	1.20	100
11.	ಮಹಮದ್ ಸೈಯದ್ ಬಿನ್. ಎಸ್.ಕೆ. ಹಮದ್ ಅಬ್ಬಾಸ್, ಗುಮ್ಮನಹಳ್ಳಿ, ಶಿರಾ ತಾ:	55:ಪಿ	4.00	240
12.	ಈಶ್ವರಾಚಾರಿ, ಗೋವಿಂದಾಚಾರಿ, ನಾಗೇನಹಳ್ಳಿ, ಸೀಬೆ ಅಗ್ರಹಾರ, ಶಿರಾ ತಾ:	211:2	1.20	80
13.	ನರಸಮ್ಮ, ತಿಪ್ಪಯ್ಯ, ನಾಗೇನಹಳ್ಳಿ, ಸೀಬೆ ಅಗ್ರಹಾರ,ಶಿರಾ ತಾ:	204:2	1.20	60
14.	ನರಸಿಂಹಯ್ಯ ಬಿನ್.ಈರಪ್ಪ, ನಾಗೇನಹಳ್ಳಿ, ಸೀಬೆ ಅಗ್ರಹಾರ ಶಿರಾ ತಾ:	209:8	1.00	50
15.	ಪುಟ್ಟಹನುಮಕ್ಕ ಕೊಂ.ಒಬಳಯ್ಯ, ನಾಗೇನಹಳ್ಳಿ, ಸೀಬೆ ಅಗ್ರಹಾರ ಶಿರಾ ತಾ:	211:1	0.20	40
16.	ಪುಟ್ಟಮ್ಮ ಪಾರ್ವತಮ್ಮ ದೊಡ್ಡೀರಣ್ಣ, ನಾಗೇನಹಳ್ಳಿ, ಸೀಬೆ ಅಗ್ರಹಾರ, ಶಿರಾ ತಾ:	192:3	1.20	85

1	2	3	4	5
17.	ಚಿಕ್ಕ ಓಬಳಯ್ಯ ಬಿನ್. ಓಬಳಯ್ಯ, ನಾಗೇನಹಳ್ಳಿ, ಸೀಬೆ ಅಗ್ರಹಾರ, ಯುಜಿರೆ ಅಂಚೆ, ಶಿರಾ ತಾ:	138:1 4:3	1.20	85
18.	ರಂಗನಾಥಪ್ಪ, ಈರಣ್ಣ, ಹುಂಜನಾಳ್, ಶಿರಾ ತಾ:	210	4.00	240
19.	ರುಕ್ಮಿಣಿಬಾಯಿ, ಸರಸೋಜಿರಾವ್, ಯರದಕಟ್ಟೆ, ಶಿರಾ ತಾ:	38	2.00	120
20.	ಡಿ.ವೀರನಾಗಪ್ಪ, ಕೆ.ಬಿ. ಮರುಳಪ್ಪ, ಕಳ್ಳಂಬೆಳ್ಳ, ಶಿರಾ ತಾ:	350 411:1	4.00	240
21.	ಬಿ.ವಿ.ರಾಮಲಿಂಗಯ್ಯ ಬಿನ್.ವೀರಣ್ಣ, ಬೂತಕಾಲನಹಳ್ಳಿ, ಬಂದಕುಂಟೆ, ಶಿರಾ ತಾ:	139:2	4.00	250
22.	ಗಿರಿತಿಮ್ಮಯ್ಯ ಬಿನ್.ತಿಮ್ಮಯ್ಯ, ಬೂತಕಾಲನಹಳ್ಳಿ ಬಂದಕುಂಟೆ ಅಂಚೆ, ಶಿರಾ ತಾ:	85:1 74:1	1.30	100
23.	ನಿಂಗಣ್ಣ ಬಿನ್.ಈರಣ್ಣ, ಬೂತಕಾಲಹಳ್ಳಿ, ಬಂದಕುಂಟೆ ಅಂಚೆ, ಶಿರಾ ತಾ:	9	3.20	200
24.	ಶಿವಲಿಂಗಪ್ಪ ಬಿನ್.ಉದ್ದಣ್ಣ, ಜವನಹಳ್ಳಿ, ಬ್ರಹ್ಮಸಂದ್ರ ಅಂಚೆ, ಶಿರಾ ತಾ:	12:1ಪಿ 1:4	5.00	300
25.	ಈರಚಿಕ್ಕಪ್ಪ ಬಿನ್ ಸಣ್ಣಕುರುರಪ್ಪ, ಕೊಟ್ಟಿ, ಕೊಟ್ಟಿ ಅಂಚೆ, ಶಿರಾ ತಾ:	167	1.20	90
26.	ಕರೆತಿಮ್ಮೇಗೌಡ, ಉಜ್ಜನಕಂಟೆ, ತಾವರೆಕೆರೆ ಅಂಚೆ, ಶಿರಾ ತಾ:	23	5.00	300
27.	ಮಾರಕ್ಕ ಕೊಂ.ಸಾಗಣ್ಣ, ಮೇಳೆಕೋಟೆ, ತಾವರೆಕೆರೆ ಅಂಚೆ, ಶಿರಾ ತಾ:	24:2	2.20	150

1	2	3	4	5
28.	ನಿಂಗಣ್ಣ ಬಿನ್ ಚಿಕ್ಕಣ್ಣ, ಚಿಕ್ಕಣ್ಣ ಉಜ್ಜನಕುಂಟೆ, ತಾವರೆಕೆರೆ ಅಂಚೆ ಶಿರಾ ತಾ:	35	2.10	135
29.	ಜೆ.ಆರ್.ಲಕ್ಷ್ಮಣಪ್ಪ ಬಿನ್.ರಾಮೇಗೌಡ, ಶಿರಾಟೌನ್, ರೈಸ್‌ಮಿಲ್ ರಸ್ತೆ	137:136	5.00	300
30.	ಮಲ್ಲಯ್ಯ ಬಿನ್ ಮಲ್ಲಯ್ಯ ಹೂವಿನಾಳು, ಕುಂಟೇಗೌಡನಹಳ್ಳಿ, ಅಂಚೆ ಶಿರಾ ತಾ:	69	0.20	275
31.	ದೊಡ್ಡಿರಪ್ಪ ಬಿನ್. ಈರಪ್ಪ ಹೂವಿನಾಳು, ಕುಂಟೇಗೌಡನಹಳ್ಳಿ ಅಂಚೆ, ಶಿರಾ ತಾ:	70:1	1.20	85
32.	ಚನ್ನಪ್ಪ ಬಿನ್ ಅಡವಪ್ಪ ಕಲಿಶೆಟ್ಟಿಹಳ್ಳಿ, ಹುಂಜವಾಳ ಅಂಚೆ ಶಿರಾ ತಾ :	56 : 5 125:1 39:2	3.20	205
33.	ಬಿ.ಆರ್. ಲಕ್ಷ್ಮೀನರಾಯಣ, ಬಳ್ಳಿರಂಗಪ್ಪ, ತಾವರೆಕೆರೆ ಅಂಚೆ, ಶಿರಾ ತಾ:	241	3.00	200
34.	ಹನುಮಂತರಾಯಪ್ಪ, ಯರಪಾದನಹಳ್ಳಿ, ದೊಡ್ಡಅಗ್ರಹಾರ, ಶಿರಾ ತಾ:	8:3	2.00	120
35.	ತಿಮ್ಮಕ್ಕ ಕೊ.ರಂಗಧಾಮಯ್ಯ, ಹೊಸಹಳ್ಳಿ ಯಾದಲಕು ಅಂಚೆ, ಶಿರಾ ತಾ:	30:19 29:2	1.00	150
36.	ಕಾಯಪ್ಪ ಬಿನ್.ರಂಗಪ್ಪ, ಹಾವಿನಾಳು, ಕುಂಟಗೌಡನಹಳ್ಳಿ, ಶಿರಾ ತಾ:	82:1	1.00	60
37.	ಕರಿಣ್ಣ, ಅಮಲಗೊಂದಿ, ಸೀಬೆ ಅಗ್ರಹಾರ, ಶಿ ತಾ:	156	2.00	120
38.	ಂಗನಾಥಪ್ಪ ಬಿನ್.ರಂಗಪ್ಪ ಯಾದವಬಾಗಿ, ಸಂಟೇಗೌಡಪಾಳ್ಯ, ಶಿರಾ ತಾ:	200:4	1.10	70
39.	ರಾಮಕೃಷ್ಣ ರೆಡ್ಡಿ, ನಾರಾಯಣರೆಡ್ಡಿ, ಚನ್ನನಕುಂಟೆ, ಶಿರಾ ತಾ:	10:1	2.30	165

1	2	3	4	5
40.	ವೆಂಕಟಪ್ಪ ಬಿನ್ ರಂಗಪ್ಪ, ದೇವರಹಳ್ಳಿ, ಶಿರಾ ತಾ:	33:1	5.00	300
41.	ಪಾಪಣ್ಣ ಬಿನ್ ತಿಮ್ಮಪ್ಪ ಶೌಖದಡಿ ಅಂಚೆ, ಶಿರಾ ತಾ:	36:1	0.20	30
42.	ಭೀಮಣ್ಣ, ಚಿಕ್ಕರಂಗಪ್ಪ, ಲಿಂಗದಹಳ್ಳಿ, ಕೊಟ್ಟಿ ಅಂಚೆ, ಶಿರಾ ತಾ:	241	1.20	100
43.	ಎಲ್.ಬಿ.ಗೋವಿಂದಪ್ಪ ಬಿನ್ ತಿಮ್ಮಣ್ಣ, ಲಿಂಗದಹಳ್ಳಿ, ಶಿರಾ ತಾ:	257	0.30	4 6
44.	ಜವನಪ್ಪ ಉದ್ದಪ್ಪ, ಹನುಮಂತನಗರ, ಸೀಬೆ ಅಗ್ರಹರ, ಶಿರಾ ತಾ:	287	4.10	260
45.	ಜೆ.ಕಾಂತರಾಜು ಬಿನ್. ಎಲ್.ಬಿ.ಗೋವಿಂದಪ್ಪ, ಲಿಂಗದಹಳ್ಳಿ, ಕೊಟ್ಟಿ ಅಂಚೆ, ಶಿರಾ ತಾ:	?57	0.20	35
46.	ಈರಮುದ್ದಪ್ಪ ಸಿರಗುಪ್ಪ, ಕಂಚಿಗನಹಳ್ಳಿ, ವಡನಹಳ್ಳಿ ಶಿರಾ ತಾ:	೨	5.00	300
47.	ನಿಮಕ್ಕ ಕೊಂ.ಹೆಚ್. ವೆಂಕಟಪ್ಪ, ಹರಡೇಚಿಕ್ಕನಹಳ್ಳಿ, ಕುಂಟೇಗೌಡನಹಳ್ಳಿ ಅಂಚೆ, ಶಿರಾ ತಾ:	218:4ಬಿ	1.20	96
48.	ದಾಸಪ್ಪ ಬಿನ್.ಕಾವಲಪ್ಪ, ರತ್ನಸಂದ್ರ ಅಂಚೆ, ಶಿರಾ ತಾ:	911	2.00	120
49.	ಕೆ.ಸಿದ್ದಪ್ಪ ಬಿನ್ ಕಾವಲಪ್ಪ, ರತ್ನಸಂದ್ರ ಅಂಚೆ, ಶಿರಾ ತಾ:	911	?.00	120
50.	ಶಾರದಮ್ಮ ಬಿನ್.ರಂಡಪ್ಪ, ಮುಚ್ಚವೀರನಹಳ್ಳಿ, ಬೇಲಗುಂಡ ಅಂಚೆ, ಶಿರಾ ತಾ:	6	1.0	60
51.	ಅಪ್ಪಣ್ಣ, ಬಿನ್.ರಂಗಪ್ಪ, ಯಲದಬಾಗಿ, ಕುಂಟೇಗೌಡನಹಳ್ಳಿ, ಶಿರಾ ಅಂಚೆ	10	1.20	100
52.	ಶ್ರೀ ರಾಜಣ್ಣ, ಬಿನ್.ಜವರಪ್ಪ, ಅಮಲಗೊಂದಿ, ಬೇಬಿ ಅಗ್ರಹಾರ ಅಂಚೆ, ಶಿರಾ ತಾ:	163:5	2.00	?0
53.	ರಂಗೇಗೌಡ ಬಿನ್.ವೆಂಕಟರಾಮರೆಡ್ಡಿ, ಹರಡೆಚಿಕ್ಕನಹಳ್ಳಿ, ಶಿರಾ ತಾ: ಕುಂಟೇಗೌಡನಹಳ್ಳಿ	243:2ಎ	0.20	.
54.	ಹೆಚ್.ಬಿ.ನಾಗಣ್ಣ ಬಿನ್.ಬೀರಲಿಂಗಪ್ಪ, ಹುಣಸೇನಹಳ್ಳಿ, ಶಿರಾ ತಾ:	56:4	3.20	2 1

1	2	3	4	5
55.	ಭೀಮಣ್ಣ ಬಿನ್. ಜುಂಗಣ್ಣ, ಲಕ್ಕನಹಳ್ಳಿ ಕಳ್ಳಂಬೆಳ್ಳ ಅಂಚೆ, ಶಿರಾ ತಾ:	88	5.00	300
56.	ಎಸ್. ಸುನಂದ ಕೊಂ.ಹೆಚ್.ಎನ್. ನಂಜುಂಡಯ್ಯ, ಹುಂಜನಾಳ, ಶಿರಾ ತಾ:	98:1	5.00	300
57.	ವೈ.ಬಿ. ರಂಗನಾಥ ಬಿನ್.ಬೊಮ್ಮಣ್ಣ, ಯರಮಾದನಹಳ್ಳಿ, ದೊಡ್ಡ ಅಗ್ರಹಾರ, ಶಿರಾ ತಾ:	15:1ಎ	4.00	240
58.	ವೀರಮ್ಮ ಕೊಂ.ಲೇ.ಎಂ.ನಂಜಪ್ಪ, ಬಸವನಹಳ್ಳಿ, ದೇವರಹಳ್ಳಿ, ಶಿರಾ ತಾ:	4:2 4:4 4:3	5.0	300
59.	ಮರುಳಪ್ಪ ಲೇ.ಬೊಮ್ಮಣ್ಣ, ಗಿರಿನಾಥನಹಳ್ಳಿ	12:1,25:5ಎ:26:7	5.00	300
60.	ರಂಗಪ್ಪ ಬಿನ್.ದೊಡ್ಡರಂಗಪ್ಪ, ಕರೆತಿಮ್ಮನಹಳ್ಳಿ, ಬಾಣಗೆರೆ ಅಂಚೆ, ಶಿರಾ ತಾ:	26:2	3.00	180
61.	ಕರಿಯಪ್ಪ ಬಿನ್.ಗುಜ್ಜಪ್ಪ, ಕರಿತಿಮ್ಮನಹಳ್ಳಿ, ಚಿಕ್ಕಬಾಳಗೆರೆ ಅಂಚೆ, ಶಿರಾ ತಾ:	68:5	5.00	300
62.	ಬಿನ್.ಚಿಕ್ಕಣ್ಣ, ಕರಿತಿಮ್ಮನಹಳ್ಳಿ ಚಿಕ್ಕಬಾಣಗೆರೆ ಅಂಚೆ ಶಿರಾ ತಾ:	26:3	2.00	120
63.	ತಿಮ್ಮಕ್ಕ ಕೊಂ.ಬದನಾಗಪ್ಪ, ಕರೆತಿಮ್ಮನಹಳ್ಳಿ, ಚಿಕ್ಕಬಾಣಗೆರೆ ಅಂಚೆ, ಶಿರಾ ತಾ:	62:2	3.20	210
64.	ಪುಟ್ಟಣ್ಣ ಬಿನ್. ಹನುಮಂತಪ್ಪ, ಕರೆತಿಮ್ಮನಹಳ್ಳಿ, ಶಿರಾ ತಾ:	46:3, 44:3	2.00	120
65.	ಭೀಮಪ್ಪ ಬಿನ್. ಚಿಕ್ಕಹನುಮೇಗೌಡ, ಕರೆತಿಮ್ಮನಹಳ್ಳಿ, ಚಿಕ್ಕಬಾಣಗೆರೆ ಅಂಚೆ, ಶಿರಾ ತಾ:	62:2	3.00	180
66.	1 ಶಿವಣ್ಣ ಬಿನ್.ಲೇಟ್ ನರಸೇಗೌಡ, ಹುಂಜನಾಳ ಅಂಚೆ, ಶಿರಾ ತಾ:	269:1	2.20	150
67.	ಎಲ್.ಬಿ.ತಿಮ್ಮಯ್ಯ ಬಿನ್.ಡಿ.ತಿಮ್ಮಣ್ಣ, ಲಿಂಗದಹಳ್ಳಿ ಕೊಪ್ಪ ಅಂಚೆ, ಶಿರಾ ತಾ:	257	2.4	125

1	2	3	4	5
68.	ಗೌಡಪ್ಪ ಬಿನ್.ಹನುಮಪ್ಪ, ಚೆನ್ನನಕುಂಟೆ, ಶಿರಾ ತಾ:	2	1.20	80
69.	ಮರಿಯಪ್ಪ ಬಿನ್. ಮರಿಯಪ್ಪ, ಹನುಪನಹಳ್ಳಿ, ಹೊನ್ನಗೊಂಡನಹಳ್ಳಿ ಅಂಚೆ ಶಿರಾ ತಾ:	39:4	0.30	40
70.	ಎಸ್.ಗಂಗಮ್ಮ ಕೊಂ.ಸಿದ್ದಬಸವಯ್ಯ, ಗೌರಿಶಂಕರ ನಿಲಯ, ಜ್ಯೋತಿ ನಗರ, ಶಿರಾ ತಾ:	211	3.00	180
71.	ಸಣ್ಣ ಕರಿಯಪ್ಪ ಬಿನ್.ಚನ್ನಪ್ಪ ಕಾಳೀಹಳ್ಳಿ	14:2	2.00	120
72.	ಸಿ.ಎಂ.ಶಿವಕುಮಾರ್ ಬಿನ್ ಮಹಾಲಿಂಗಪ್ಪ, ಪುಟ್ಟಹನುಮಯ್ಯ, ಸೀಬೆ ಅಗ್ರಹಾರ ಅಂಚೆ, ಶಿರಾ ತಾ:	169:1-3 170:3-22	3.00	180
73.	ಲಕ್ಷ್ಮಮ್ಮ ಕೊಂ.ಪುಟ್ಟಣ್ಣ, ಕಾಳೀನಹಳ್ಳಿ	177:2ಪಿ	4.00	240
74.	ಎಸ್.ವಿ.ರಂಗನಾಥಪ್ಪ ಬಿನ್. ವೀರಹೊನ್ನಪ್ಪ, ನೆಲದಿಮ್ಮನಹಳ್ಳಿ ಬ್ರಹ್ಮಸಂದ್ರ ಅಂಚೆ, ಶಿರಾ ತಾ:	22	4.00	240
75.	ಬಾಳಯ್ಯ ಬಿನ್. ಚಿಕ್ಕಮಲ್ಲಯ್ಯ, ಕಪ್ಪೇನಹಳ್ಳಿ, ಬ್ರಹ್ಮಸಂದ್ರ ಅಂಚೆ, ಶಿರಾ ತಾ:	19	3.00	180
76.	ಪುಟ್ಟಮ್ಮ ಕೋಡಚನ್ನ, ಬನ್ನೇನಹಳ್ಳಿ, ಬ್ರಹ್ಮಸಂದ್ರ ಅಂಚೆ	3:3 3:6	3.00	100
77.	ಜಿ.ಹನುಮಯ್ಯ ಬಿನ್.ಗುಜ್ಜಾರಪ್ಪ, ಎಸ್ ಎಚ್ ಪಾಳ್ಯ, ಸೀಬೆ ಅಗ್ರಹಾರ ಶಿರಾ ತಾ:	69:3,93:1 95:2,80:2	5.00	300
78.	ಲಕ್ಷ್ಮಮ್ಮ ಕೊಂ.ಮಾದಪ್ಪ, ಚನ್ನೇನಹಳ್ಳಿ, ಬ್ರಹ್ಮಸಂದ್ರ ಅಂಚೆ, ಶಿರಾ ತಾ:	23	4.00	240
79.	ಟಿ.ರಂಗನಾಥಪ್ಪ ಬಿನ್ ತಿಪ್ಪಣ್ಣ, ಸೀಬೆ ಅಗ್ರಹಾರ ಅಂಚೆ	139:2ಪಿ	5.00	300
80.	ಜಗದೀಶ ಬಿನ್.ವೀರಣ್ಣ, ಚನ್ನೇನಹಳ್ಳಿ, ಬ್ರಹ್ಮಸಂದ್ರ ಅಂಚೆ, ಶಿರಾ ತಾ:	39,34	4.00	240
81.	ಹನುಮಂತರಾಯಪ್ಪ ಬಿನ್.ರಂಗಪ್ಪ, ಚನ್ನೇನಹಳ್ಳಿ, ಬ್ರಹ್ಮಸಂದ್ರ ಅಂಚೆ ಶಿರಾ ತಾ:	32:3	2.20	150

1	2	3	4	5
82.	ಬಸವರಾಜು ಬಿನ್.ರೇವಣ್ಣ, ಬ್ರಹ್ಮಸಂದ್ರ ಅಂಚೆ, ಶಿರಾ ತಾ:	65:2	2.00	1 2 0
83.	ಅಬ್ದುಲ್ ಹಪೌರ ಬಿನ್.ಅಬ್ದುಲ್ ಖರೀಮ್‌ಸಾಬ್, ತಾವರೆಕೆರೆ, ಶಿರಾ ತಾ:	16:1	2.00	120
84.	ಮಹಬೂಬ್‌ಜಾನ್ ಬಿನ್.ಅಬ್ದುಲ್ ಅಜೀಜ್, ತಾವರೆಕೆರೆ, ಶಿರಾ ತಾ:	7:1	1.00	50
85.	ಅಬ್ದುಲ್ ಹಮೀದ್ ಬಿನ್.ಅಬ್ದುಲ್ ಮುಜಿಬ್‌ಸಾಬ್, ತಾವರೆಕೆರೆ, ಶಿರಾ ತಾ:	216:1	2.00	120
		216:2	1.20	90
86.	ಲಿಂಗೇಗೌಡ, ಶಾಖಿದಡು, ಶಿರಾ ತಾ:	54:3	5.00	300
87.	ಎಸ್. ಚನ್ನಪ್ಪ ಬಿನ್.ಸಿದ್ದರಾಮಪ್ಪ, ಕಡಬಗೆರೆ	237:2	2.00	120
88.	ಜಿ. ತಿಮ್ಮಪ್ಪ, ಸಿದ್ದಣ್ಣ, ಶೆಟ್ಟಿಗನಹಳ್ಳಿ, ಸಿ.ಬಿ.ಗೆರೆ ಅಂಚೆ, ಶಿರಾ ತಾ:	77.3	4.00	240
89.	ಜಿ.ಜಯರಾಮಪ್ಪ ಬಿನ್.ಸಿದ್ದಣ್ಣ, ಸಿ.ಬಿ.ಗೆರೆ ಅಂಚೆ, ಶೆಟ್ಟಿಗನಹಳ್ಳಿ, ಶಿರಾ ತಾ:	77:2	4.00	240

195-96ನೇ ಸಾಲಿನಲ್ಲಿ ತೆಂಗು ಅಭಿವೃದ್ಧಿ ಮಂಡಳಿಗೆ ಶಿಫಾರಸ್ಸು ಮಾಡಿದ ಫಲಾನುಭವಿಗಳ ಪಟ್ಟಿ :

ಕ್ರ.ಸಂ.	ಹೆಸರು ಮತ್ತು ವಿಳಾಸ	ಸ.ನಂ.	ವಿಸ್ತೀರ್ಣ	ಗಿಡಗಳ ಸಂಖ್ಯೆ
1	2	3	4	5
01.	ಲಕ್ಷ್ಮೀದೇವಮ್ಮ ಕೋಂ ಚಿಕ್ಕಮರುಳಪ್ಪ ಕಳ್ಳಂಬೆಳ್ಳ	323	2-20	150
02.	ಲಕ್ಷ್ಮಯ್ಯ, ಲಕ್ಕನಹಳ್ಳಿ	480	5-00	300
03.	ಕೃಷ್ಣಮೂರ್ತಿ ಲಕ್ಷ್ಮಯ್ಯ, ನಿಜಯ್ಯನಪಾಳ್ಯ	300	5-00	390
04.	ಬಿ.ರಾಮಣ್ಣ ಬಿನ್. ಬಾದಪ್ಪ ಕಟಾವೀರನಹಳ್ಳಿ	181	5-00	300
05.	ರಂಗಪ್ಪ ಬಿನ್.ತಿಪ್ಪಣ್ಣ ಬಸವಂತನಹಳ್ಳಿ	183	5-00	300
06.	ಮದ್ದಮ್ಮ ಕೋಂ ಬಾದಪ್ಪ, ಕಟಾವೀರನಹಳ್ಳಿ	361	5-00	300
07.	ಬಾದಪ್ಪ ಬಿನ್.ಕಟಾವೀರನಹಳ್ಳಿ "	386	5-00	300
08.	ಈಶ್ವರಪ್ಪ ಬಿನ್.ರಂಗಣ್ಣ, ಬಸವಂತನಹಳ್ಳಿ	131	5-00	300
09.	ವೆಂಕಟೇಶ್ ಬಿನ್.ಲೇ ವೆಂಕಟ ಬೋವಿ ಕಳ್ಳಂಬೆಳ್ಳ	248	5-00	300
10.	ಮಲ್ಲೇಶಪ್ಪ ಬಿನ್.ಲೇ. ವೀರಣ್ಣ ಮರಳಪ್ಪನಪಾಳ್ಯ	189	4-00	240
11.	ಲಕ್ಷ್ಮಯ್ಯ ಬಿನ್.ನಿಜ್ಜಯ್ಯನಪಾಳ್ಯ	210:1ಎ	4-00	240
12.	ಈರಣ್ಣ ಬಿನ್.ಲೇ.ಜೂಜಣ್ಣ, ಲಕ್ಕನಹಳ್ಳಿ	279	5-00	300
13.	ಕೆ. ರಂಗನಾಥಪ್ಪ ಬಿನ್.ರಂಗಪ್ಪ, ಚಿಕ್ಕದಾಸರಹಳ್ಳಿ	340:1ಪಿ	4-30	270
14.	ಕೆ. ರಂಗನಾಥಪ್ಪ ಬಿನ್.ಲಕ್ಕನಹಳ್ಳಿ	156	5-00	300
15.	ಹೆಚ್.ಸಿ.ಗುರಪ್ರಸಾದ್ ಬಿನ್. ಪುಟ್ಟಲಿಂಗಪ್ಪ ಜ್ಯೋತಿನಗರ	319:7	4-30	270
16.	ಮಹಾಲಿಂಗಪ್ಪ ಬಿನ್. ಭೀಮಯ್ಯ, ಕಳ್ಳಂಬೆಳ್ಳ	172:1ಪಿ	4-00	240
17.	ಪುಟ್ಟತಾಯಮ್ಮ ಬಿನ್. ಕೃಷ್ಣಪ್ಪ ಕಟಾವೀರನಹಳ್ಳಿ	124:3ಪಿ	5-00	300

1	2	3	4	5
18.	ಎ.ಹೆಚ್.ಗುಜ್ಜಾರಪ್ಪ ಬಿನ್.ಹನುಮಪ್ಪ ದೊಡ್ಡಬಾಣಗೆರೆ ಅಂಚೆ, ಶಿರಾ ತಾಲ್ಲೂಕು.	16	5-00	300
19.	ಈರಮ್ಮಕೋಂ ಗೋವಿಂದಪ್ಪ ಕೆರೆತಿಮ್ಮನಹಳ್ಳಿ ಚಿಕ್ಕಬಾಣಗೆರೆ ಅಂಚೆ ಶಿರಾ ತಾಲ್ಲೂಕು.	56	5-00	300
20.	ಕೆ.ತಿಪ್ಪೇಸ್ವಾಮಿ ಬಿನ್.ಲೋಕಾಸಿಯಪ್ಪ, ಕರೆತಿಮ್ಮನಹಳ್ಳಿ, ಚಿಕ್ಕಬಾಣಗೆರೆ ಅಂಚೆ ಶಿರಾ ತಾ.	41	5-00	300
21.	ತಿಮ್ಮೇಗೌಡ ಬಿನ್. ಚಿಕ್ಕಹನುಮೇಗೌಡ, ಕರೆತಿಮ್ಮನಹಳ್ಳಿ, ಚಿಕ್ಕಬಾಣಗೆರೆ, ಶಿರಾ ತಾ.	56	5-00	300
22.	ಕೆಂಚಪ್ಪ ಬಿನ್.ಕುಂಟನಾಸಪ್ಪ, ದೊಡ್ಡಬಾಣಗೆರೆ, ಚಿಕ್ಕಬಾಣಗೆರೆ ಅಂಚೆ, ಶಿರಾ ತಾಲ್ಲೂಕು	325	5-00	300
23.	ಲಕ್ಷಕ್ಕ ಕೋಂ ಲೇ ಉದ್ದಪ್ಪ, ಮಾಡ್ದೇನಹಳ್ಳಿ ಚಿಕ್ಕಬಾಣಗೆರೆ ಅಂಚೆ ಶಿರಾ ತಾಲ್ಲೂಕು	287	5-00	300
24.	ತಾವರಿನಾಯ್ಕ ಬಿನ್.ಸೋಮ್ಲನಾಯ್ಕ್ ಸೋಮ್ಲನಾಯಕನ ಮರದಕಟ್ಟೆ ಅಂಚೆ ಶಿರಾ ತಾಲ್ಲೂಕು.	8:2ಪಿ	2-20	150
25.	ಮಂಜುನಾಥ ಬಿನ್.ನಾಗರಾಜು, ಹೊಸೂರು	233:6ಎ	4-00	240
26.	ಕಂಪಸಿದ್ದಯ್ಯ, ಯರಪ್ಪಣ್ಣ, ಉದ್ದಯ್ಯನ ಪಾಳ್ಯ	121	5-00	240
27.	ಬೋದಣ್ಣ ಬಿನ್.ಲೇ. ಸಿದ್ದಯ್ಯ, ಹೊಸೂರು	203:4ಎ	5-00	300
28.	ರಮೇಶ್ ಬಿನ್.ಲೇ.ಹನುಮಂತಪ್ಪ ಹೊಸೂರು	181	5-00	300
29.	ಸಿ.ರಮೇಶ್ ಬಿನ್.ಒಕ್ಕಕ್ಯಾತಪ್ಪ, ಉದ್ದಯ್ಯನಪಾಳ್ಯ	178:5ಪಿ	5-00	300
30.	ಶಾರದಮ್ಮ ಕೋಂ ಸಿದ್ದಣ್ಣ, ಹೊಸೂರು	321:7ಎ	5-00	300
31.	ಸಿ.ಕೆ. ದಾಸೇಗೌಡ ಬಿನ್.ರಾಮದಾಸಪ್ಪ, "	299	5-00	300
32.	ಹೆಚ್.ಎಸ್.ಸುಧಾ, ಬಿನ್.ಜಗದೀಶ್, ಹೊಸೂರು	222:1ಎ	5-00	300
33.	ನರಸಿಂಹಮೂರ್ತಿ ಬಿನ್.ಲೇ.ಮರಿಯಣ್ಣ "	176:1ಎ	5-00	300
34.	ಬಿ.ಸಿ. ನಾಗರಾಜು ಬಿನ್. ಚೌಡಪ್ಪ, ಹೊಸೂರು	279:3ಎ	5-00	300

1	2	3	4	5
35.	ವಿ.ಲಕ್ಷ್ಮಣ್, ಬಿನ್. ವೀರಹನುಮಯ್ಯ, ಬಿನ್ನಿನಗರ ಶಿರಾ.ತಾಲ್ಲೂಕು.	73	3-00	200
36.	ಎಲ್. ರಮೇಶ್, ಬಿನ್.ಲಕ್ಷ್ಮಣ್, ಬಿನ್ನಿನಗರ, ಶಿರಾಟೌನ್	225:3	3-20	200
37.	ಮಂಜುನಾಥ್ ಬಿನ್.ಬಿ.ಸಿ.ಬಸವರಾಜು, ಬುಕ್ಕಾಪಟ್ಟಣ	6:ಸಿ	5-00	300
38.	ಬಿ.ದಿವಾಕರ್ ಬಿನ್.ಬಿ.ಸಿ.ಬಸವರಾಜು, ಬುಕ್ಕಾಪಟ್ಟಣ	6:ಸಿ	5-00	300
39.	ಬೀಮಣ್ಣ ಬಿನ್ ಜುಂಗಣ್ಣ, ಅಕ್ಕನಹಳ್ಳಿ, ಶಿರಾ ತಾ:	88	5-00	300
40.	ಮರಿಸಿದ್ಧಗಂಗಮ್ಮ ಕೋಂ ಲಕ್ಷ್ಮೀಕಾಂತ ಕಳ್ಳಂಬೆಳ್ಳ	56:4	5-00	300
41.	ಹೆಚ್.ಎಸ್. ಸಿದ್ದೇಶ್ ಬಿನ್.ಸಿದ್ಧಣ್ಣ, ಬಸವನಹಳ್ಳಿ ಕಳ್ಳಂಬೆಳ್ಳ ಅಂಚೆ	48	5-00	300
42.	ಬಿ.ಆರ್.ರಂಗನಾಥ ಬಿನ್.ಬಿ.ರಾಮಯ್ಯ, ಬಸವನಹಳ್ಳಿ, ಕಳ್ಳಂಬೆಳ್ಳ	125	5-00	300
43.	ಬಿ.ಆರ್.ರಾಜು ಬಿನ್.ರಂಗಣ್ಣ, ಬಸವಂತನಹಳ್ಳಿ ಕಳ್ಳಂಬೆಳ್ಳ	11	5-00	300
44.	ಕೆ.ಬಿ.ರಂಗನಾಥ ಬಿನ್.ಬಾಡೇಗೌಡ, ಕಳ್ಳಂಬೆಳ್ಳ	226:1	2 1:2	150
45.	ಮಲ್ಲಯ್ಯ ಬಿನ್.ಕಾಮಯ್ಯ, ಯರಮಾರನಹಳ್ಳಿ	10:1	5-00	300
46.	ರಾಮರಾಜ್ಳಾಂಬೆ, ಲಕ್ಕನಹಳ್ಳಿ, ಕಳ್ಳಂಬೆಳ್ಳ	115	5-00	300
47.	ವೈ.ಬಿ. ರಂಗನಾಥಪ್ಪ ಟಿ.ಯರಮಾರನಹಳ್ಳಿ, ದೊಡ್ಡ ಅಗ್ರಹಾರ ಅಂಚೆ	111	5-00	300
48.	ಹೆಚ್.ಜೆ.ಸಿದ್ದಣ್ಣ ಬಿನ್.ಜೋಗಣ್ಣ ದೊಡ್ಡ ಅಗ್ರಹಾರ	121	5-00	300
49.	ಆರ್.ಎಲ್.ರಮೇಶ್ ಬಿನ್.ರಂಗಣ್ಣ, ಕಳ್ಳಂಬೆಳ್ಳ	103	5-00	300
50.	ವೆಂಕಟಪ್ಪ ಬಿನ್.ರಂಗಣ್ಣ, ಕಳ್ಳಂಬೆಳ್ಳ	32	5-00	300
51.	ಅನಿತಾ ಕೋಂ ಪ್ರಕಾಶ್, ಬಸವಂತನಹಳ್ಳಿ, ಕಳ್ಳಂಬೆಳ್ಳ	93	5-00	300
52.	ಕೆ.ಎಂ. ಹೆಂಚಾರಪ್ಪ ಬಿನ್.ಹೆಚ್. ಮೂಕಣ್ಣಪ್ಪ	93	5-00	300

1	2	3	4	5
53.	ಪಿ.ಬಿ. ಸತ್ಯನಾರಾಯಣ ಬಿನ್.ಪಿ.ಬಿ. ಬೊಮ್ಮೇಗೌಡ, ಮಾನಂಗಿ	631	5-00	300
54.	ಬಿ.ಹೆಚ್.ಲಿಂಗಣ್ಣ ಬಿನ್.ಬಿ.ಹೊನ್ನಪ್ಪ. ಭೂಪಸಂದ್ರ	113	5-00	300
55.	ಗೋವಿಂದಪ್ಪ ಬಿನ್.ಹನುಮಂತಪ್ಪ ಚಿಕ್ಕಬಾಣಗೆರೆ ಅಂಚೆ, ಕೆರೆತಿಮ್ಮನಹಳ್ಳಿ	56	5-00	300
56.	ಜಿ. ಜಯರಾಮಪ್ಪ ಬಿನ್.ಗೋವಿಂದಪ್ಪ, ಕುರುಬರಾಮನಹಳ್ಳಿ	77:3	4-00	240
57.	ಜಿ.ತಿಮ್ಮಪ್ಪ ಬಿನ್.ಗೋವಿಂದಪ್ಪ ಕುರುಬರಾಮನಹಳ್ಳಿ, ಚಿಕ್ಕಬಾಣಗೆರೆ ಅಂಚೆ	77:2	4-00	240

1996-97ನೇ ಸಾಲಿನಲ್ಲಿ ತೆಂಗು ಅಭಿವೃದ್ಧಿ ಮಂಡಳಿಗೆ ಶಿಫಾರಸ್ಸು ಮಾಡಿದ ಫಲಾನುಭವಿಗಳ ಪಟ್ಟಿ.

ಕ್ರ. ಸಂ.	ಹೆಸರು, ವಿಳಾಸ	ಸರ್ವೆನಂ.	ವಿಸ್ತೀರ್ಣ ಎಕರೆಗಳಲ್ಲಿಗಳ	ಒಟ್ಟು ಗಿಡ ಸಂಖ್ಯೆ	ಯಾವ ಸಾಲಿಗೆ ಕಳುಹಿಸುತ್ತಿರುವುದು
1	2	3	4	5	6
1.	ಸಿ.ಜಿ.ವಿಮಲ ಕೋಂ ಗೊಂವಿಂದೇಗೌಡ ಸಿ.ಪಿ. ಪರತಹಳ್ಳಿ	56:ಸಿ	(5.00) 2.00 ಹೆ.	300	ಮೊದಲನೇ ಬಾರಿಗೆ
2.	ಎಚ್.ಎಸ್.ಅನಿತಾ ಕೋಂ ಪ್ರಕಾಶ್, ಬಸವಂತನಹಳ್ಳಿ	203	(5.00) 2.00	300	-"-
3.	ಮುದ್ದಮ್ಮ ಕೋಂ ಬಾರಪ್ಪ, ಕಟಾವೀರನಹಳ್ಳಿ	78	(5.00) 2.00 ಹೆ.	300	-"-
4.	ಟಿ.ಎಸ್.ರಂಗನಾಥ ಬಿನ್ ಸಿದ್ದಪ್ಪ, ಕಳ್ಳಂಬೆಳ್ಳ	348	(5.00) 2.00ಹೆ.	200	-"-
5.	ಸಿದ್ದಣ್ಣ ಬಿನ್ ಬೋಗಣ್ಣ ಹೊಸೂರು	91:2	(5.00) 2.00 ಹೆ.	300	-"-

1	2	3	4	5	6
6.	ಅಬ್ದುಲ್ ಗಫಾರ್ ಬಿನ್ ಅಬ್ದುಲ್ ಕರೀಂಸಾಬ್, ತಾವರೆಕೆರೆ	10:1 216:2 7:1	(5.00) 2.00ಹೆ.	250	-"-
7.	ಸಿದ್ದೇಶ್ ಬಿನ್ ಸಿದ್ದಣ್ಣ ಜ್ಯೋತಿನಗರ	319	(5.00) 2.00 ಹೆ.	300	-"-
8.	ಆರ್. ಆನಂದಪ್ಪ ಬಿನ್ ವೀರಗಾನಹಳ್ಳಿ, ಗೌಡಕೆರೆ ಹೋಬಳಿ	5	(5.00) 2.00 ಹೆ.	300	-"-
9.	ಕೆ.ಎಂ. ಮಹೇಂದ್ರಕುಮಾರ್ ಬಿನ್ ಕರಿಯಣ್ಣ,		(5.00) 2.00 ಹೆ.	300	-"-
10.	ಸಿ.ಆರ್. ಪ್ರಸನ್ನಕುಮಾರ್ ಬಿನ್ ಜಕ್ಕನಹಳ್ಳಿ	105	(5.00) 2.00 ಹೆ.	300	-"-
11.	ಆರ್.ಎಲ್. ರವೀಶ್ ಬಿನ್ ರಂಗಣ್ಣ ಕಳ್ಳಂಬೆಳ್ಳ	279	(5.00) 2.00 ಹೆ.	300	-"-
12.	ಎಸ್.ಶಿವಣ್ಣ ಬಿನ್.ಸಣ್ಣ ಗುಡ್ಡಯ್ಯ ಶೆಟ್ಟಿಹಳ್ಳಿ ಶಿರಾ ತಾಲ್ಲೂಕು	147	(5.00) 2.00 ಹೆ.	300	-"-
13.	ಬಿ.ಸಿ.ನಾಗರಾಜು ಬಿನ್ ಚೌಡಪ್ಪ ಹೊಸೂರು	126	(5.00) 2.00 ಹೆ.	300	-"-
14.	ಮಂಜುನಾಥ ಬಿನ್ ನಾಗರಾಜು ಹೊಸೂರು	138	(5.00) 2.00 ಹೆ.	300	-"-
15.	ಜಿ.ಆರ್.ರಾಜು ಬಿನ್ ರಂಗಪ್ಪ ಅಮರಗೋಡಿ	93	(5.00) 2.00 ಹೆ.	300	-"-
16.	ಆರ್.ಎಂ.ರಮೇಶ್ ಬಿನ್ ರಂಗಪ್ಪ ಕಳ್ಳಂಬೆಳ್ಳ	105:1	(5.00) 2.00 ಹೆ.	300	-"-
17.	ಬಿ.ಆರ್.ರಂಗನಾಥ ಬಿನ್ ರಾಮನಾಯ್ಕ, ಬಸವಂತನಹಳ್ಳಿ	125:	(5.00) 2.00 ಹೆ.	300	-"-
18.	ಜಿ.ತಿಮ್ಮಯ್ಯ ಬಿನ್ ಗೋವಿಂದಪ್ಪ, ಶಿರಾಟೌನ್	12	(6.00) 2.40 ಹೆ.	250	-"-

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೆ, ಮಾನ್ಯ ತೋಟಗಾರಿಕಾ ಸಚಿವರು ನನ್ನ ಪ್ರಶ್ನೆಗೆ ಉತ್ತರ ಕೊಡುವುದರ ಜೊತೆಗೆ ಒಂದು ಮಾರ್ಗಸೂಚಿ ಇದೆ ಎಂಬ ಮಾತನ್ನು ಹೇಳಿದ್ದಾರೆ. ಈ ಮಾರ್ಗಸೂಚಿಯ ಮುಖ್ಯವಾದ ಅಂಶ ಏನು ಎಂದು ನನಗೆ ಅರ್ಥವಾಗಲಿಲ್ಲ, ಅದಕ್ಕಾಗಿ ನಾನು ಕೇಳುತ್ತೇನೆ, ಗರಿಷ್ಟ ಎಷ್ಟು ಹಣ ಕೊಡಬಹುದು ಮತ್ತು ಕನಿಷ್ಠ ಎಷ್ಟು ಇರಬೇಕು ಅಂತರೆ ಕನಿಷ್ಠ ಅರ್ಹತೆ ಎಷ್ಟು ಇರಬೇಕು, ಆಮೇಲೆ ಎಷ್ಟು ಎಕರೆ ಜಮೀನು ಇದ್ದವರಿಗೆ ಕೊಡಲಿಕ್ಕೆ ಸಾಧ್ಯ ಅಥವಾ ಯಾರಿಗೆ ಬೇಕಾದರೂ ಕೂಡ ಕೊಡುವುದಕ್ಕೆ ಸಾಧ್ಯವೇ ಅದನ್ನು ತಾವು ದಯಮಾಡಿ ತಿಳಿಸಿ.

ಶ್ರೀ ಡಿ.ಟಿ. ಜಯಕುಮಾರ್ : ಕನಿಷ್ಠ ಕಾಲು ಎಕರೆ ಜಮೀನು ಇರಬೇಕು. ಒಬ್ಬ ರೈತನಿಗೆ ಸಣ್ಣ ಹಿಡುವಳಿದಾರ ಮಾರ್ಜಿನಲ್ ಫಾರ್‌ಮರ್ಸ್ ಎಂದು ನಾವೇನು ಹೇಳುತ್ತೇವೆ ಅವನಿಗೆ ಕನಿಷ್ಠ ಪಕ್ಷ ಕಾಲು ಎಕರೆ ಜಮೀನು ಇರಬೇಕು. ತೆಂಗು ಅಭಿವೃದ್ಧಿ ಮಂಡಳಿಯಿಂದ ಕೊಡತಕ್ಕಂಥದ್ದು ಪ್ರತಿ ಹೆಕ್ಟೇರಿಗೆ 6 ಸಾವಿರ ಮೀರದಂತೆ, ಪ್ರತಿ ಹೆಕ್ಟೇರಿಗೆ 3 ಸಾವಿರ ರೂಪಾಯಿ, ಅಂದರೆ 2 ಹೆಕ್ಟೇರಿಗೆ ಸೇರಿ ಒಟ್ಟು 6 ಸಾವಿರ ರೂಪಾಯಿಗಳು, ಅಂದರೆ ಫಸ್ಟ್ 3000 ರೂಪಾಯಿಗಳಿಗೆ ಗಿಡಗಳನ್ನು ಕೊಡುತ್ತೇವೆ ಅದನ್ನು ನಿರ್ವಹಣೆ ಮಾಡುವುದಕ್ಕೆ ಪ್ರತಿ ವರ್ಷ 1500 + 1500 ರೂಪಾಯಿಗಳನ್ನು ಕೊಡುತ್ತೇವೆ ಅಂದರೆ ಒಟ್ಟು 6000 ರೂಪಾಯಿಗಳನ್ನು ಒಬ್ಬ ಫಲಾನುಭವಿಗೆ ಕೊಡತಕ್ಕಂಥ ಯೋಜನೆ ಅದು ತೆಂಗು ಪ್ರದೇಶವನ್ನು ವಿಸ್ತರಣೆ ಮಾಡತಕ್ಕಂಥ ಯೋಜನೆ ನಮ್ಮ ಇಲಾಖೆಯಲ್ಲಿ ಇದರ ಮುಖಾಂತರ ಮಾಡುತ್ತೇವೆ. ಮತ್ತು ನೇರವಾಗಿ ನಮ್ಮ ಇಲಾಖೆಗೆ ಚೆಕ್ ಕೊಡುವುದಿಲ್ಲ, ನಾವು ಫಲಾನುಭವಿಗಳನ್ನು ಆಯ್ಕೆ ಮಾಡಿ ಸಿ.ಡಿ.ಬಿ.ಗೆ ಕಳಿಸುತ್ತೇವೆ, ಸಿಡಿಬಿ ಯವರು ಚೆಕ್ಕಿನ ರೂಪದಲ್ಲಿ ಹಣವನ್ನು ಫಲಾನುಭವಿಗಳಿಗೆ ಕಳಿಸುತ್ತಾರೆ. ಅದನ್ನು ನಿರ್ವಹಣೆ ಮಾಡಿ ಸೂಪರ್‌ವೈನ್ ಮಾಡಿ ಅದನ್ನು ಸರ್ಟಿಫೈ ಮಾಡಿದರೆ ಹಣ ಬಿಡುಗಡೆಯಾಗುತ್ತದೆ. ಇಲ್ಲಿ ಯಾವುದೇ ರೀತಿಯಿಂದ ಅವ್ಯವಹಾರ ಆಗುವುದಕ್ಕೆ ನಮ್ಮ ಇಲಾಖೆಯಿಂದ ಸಾಧ್ಯವಿಲ್ಲ. ಇದು ಸಿಡಿಬಿಗೆ ನಾವು ಚೆಕ್ ರೂಪದಲ್ಲಿ ಹಣ ಕೊಡುವ ಮುಖಾಂತರ.

ಶ್ರೀ ಟಿ.ಬಿ. ಜಯಚಂದ್ರ : ಸಿಡಿಬಿಯವರು ನೇರವಾಗಿ ಚೆಕ್ಕನ್ನು ಕೊಡುತ್ತಾರೆ, ಫಲಾನುಭವಿಗಳನ್ನು ಗುರುತಿಸತಕ್ಕಂಥವರು ನೀವೇ. ಅಂದರೆ ನೀವು ಒಂದು ಸರ್ಕಾರಿ ಏಜೆನ್ಸಿ. ಫಲಾನುಭವಿಗಳನ್ನು ಗುರುತಿಸಿದ ಮೇಲೆ ಅವರು ನೀವು ಗುರುತಿಸಿದಂಥ ಫಲಾನುಭವಿಗಳನ್ನು ಡೌಟ್ ಮಾಡುವುದಕ್ಕೆ ಹೋಗುವುದಿಲ್ಲವೆ? ನನ್ನ ಪ್ರಶ್ನೆ ಏನೆಂದರೆ ದುರುಪಯೋಗ ಏನಾದರೂ ಆದರೆ ಸಿಡಿಬಿ ಯವರು ಜವಾಬ್ದಾರರು ಅಲ್ಲ ನೀವೇ ಜವಾಬ್ದಾರರಾಗುತ್ತೀರಿ. ನೀವು ಫಲಾನುಭವಿಗಳನ್ನು ಮೂರು ವರ್ಷಗಳಲ್ಲಿ ಆಯ್ಕೆ ಮಾಡಿ ಕೊಟ್ಟಿರತಕ್ಕಂಥ ಪಟ್ಟಿಯನ್ನು ಮೇಲ್ನೋಟಕ್ಕೆ ನೋಡುವುದಾದರೆ ಕೆಲವು ಯಾವುದು ಎಂದು ನಾನು ಗುರುತಿಸಿ ಹೇಳಬಹುದೆ? ಜಮೀನು ಇಲ್ಲದೇ ಇರತಕ್ಕಂಥವರೂ ಸಹ ಇದ್ದಾರೆ, ಆಮೇಲೆ ಇದರಲ್ಲಿ ಬಹಳ ಜನ ಅಧಿಕಾರಿಗಳು ಇದ್ದಾರೆ. ಅಧಿಕಾರಿಗಳೇ ಜಾಸ್ತಿ ಜನ ಇರುವುದನ್ನು ನೋಡಿದರೆ ನನಗೆ ಅನಿಸುತ್ತದೆ. ಹಾಗಾದರೆ ನಮ್ಮ ಭಾಗದಲ್ಲಿ ತೆಂಗಿನ ಬೆಳೆ ಬೆಳೆಯತಕ್ಕವರು ಯಾರೂ ಇಲ್ಲವೆ? ಮಾರ್ಜಿನಲ್ ಅಂಡ್ ಸ್ಮಾಲ್ ಫಾರ್‌ಮರ್ಸ್ ಯಾರೂ ಇಲ್ಲವೇ? ಈ ಸ್ಕೀಮ್ ಬೇರೆ ಜನಗಳಿಗೆ ಗೊತ್ತಿಲ್ಲವೆ? ಅಧಿಕಾರಿಗಳೇ ಇದನ್ನು ಏಕೆ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಯಿತು ಇದು

ಒಂದು ಪ್ರಶ್ನೆ, ಎರಡನೆಯದು, ಸಬ್ಸಿಡರಿ ಮುಖೇನ ಕೊಟ್ಟಿರತಕ್ಕಂಥ ಯೋಜನೆಗಳಾದರೂ ಕೂಡ ದುರುಪಯೋಗವಾಗುವುದಕ್ಕೆ ಮುಖ್ಯವಾಗಿ ನಿಮ್ಮ ಇಲಾಖಾಧಿಕಾರಿಗಳೇ ಕಾರಣರಾಗಿರುತ್ತಾರೆ ಏಕೆಂದರೆ ಅವರಿಗೆ ಈ ಸ್ಕೀಮ್ ಗೊತ್ತಿರುತ್ತದೆ. ದುಡ್ಡು ಯಾವಾಗ ಬರುತ್ತದೆ, ದುಡ್ಡು ಯಾವಾಗ ಹೋಗುತ್ತದೆ ಎಂಬುದು ಅವರಿಗೆ ಬಿಟ್ಟರೆ ಬೇರೆ ಯಾರಿಗೂ ಗೊತ್ತಿಲ್ಲ, ನಾನು ಏಕೆ ಈ ಮಾತನ್ನು ಹೇಳುತ್ತೇನೆಂದರೆ, ಯಾವುದೇ ಒಂದು ಸಬ್ಸಿಡರಿ ಓರಿಯೆಂಟೆಡ್ ಸ್ಕೀಮ್ ಇರುವಂಥ ಸಂದರ್ಭದಲ್ಲಿ ಹೆಚ್ಚಿನ ಜವಾಬ್ದಾರಿ ಅಧಿಕಾರಿಯ ಮೇಲೆ ಇರಬೇಕಾಗುತ್ತದೆ. ನನ್ನ ಪ್ರಶ್ನೆಗೆ ಇದರಲ್ಲಿ ಯಾವುದೇ ಅವ್ಯವಹಾರ ನಡೆದಿಲ್ಲ ಎಂದು ಈಗಾಗಲೆ ಹೇಳಿದಿರಿ. ಅವ್ಯವಹಾರಕ್ಕೆ ಮೂಲ ಕಾರಣ ನಿಮ್ಮ ಇಲಾಖೆಯವರಾಗಿರುವುದರಿಂದ ದಯಮಾಡಿ ನಾನು ಹೇಳುವುದೇನೆಂದರೆ, ಜಮೀನು ಇಲ್ಲದೇ ಇರತಕ್ಕಂಥವರು ಯಾರು ಅರ್ಹರು ಇದ್ದಾರೋ ಅಂಥವರಿಗೆ ಆದ್ಯತೆ ಮೇಲೆ ಕೂಡಿ. ಅರ್ಜಿ ಕರೆದಿಲ್ಲ, ಏನೂ ಇಲ್ಲ, ಬರೇ ಅಧಿಕಾರಿಗಳಿಗೆ ಬಿಟ್ಟರೆ ಬೇರೆ ಯಾರೂ ಕೂಡ ಈ ಪಟ್ಟಿಯಲ್ಲಿ ಕಾಣುತ್ತಾ ಇಲ್ಲ. ಇದನ್ನು ಎನ್‌ಕ್ವೈರಿ ಮಾಡಿಸಿದರೆ ಸತ್ಯಾಂಶ ಹೊರ ಬರುತ್ತದೆ. ಇದರಿಂದ ಸಿಡಿಬಿಯಲ್ಲಿ ಇರತಕ್ಕಂಥ ಕೆಲವರಿಗೆ ಏನು ಭಾವನೆ ಇದೆ ಅದು ಹೋಗುತ್ತದೆ. ಪ್ರಾಮಾಣಿಕವಾಗಿ ಇವತ್ತು ಕನಿಷ್ಟ ಕಾಲು ಎಕರೆ ಅರ್ಧ ಎಕರೆ ಮಾಡುವಂಥ ರೈತನಿಗೆ ಸಹಾಯಧನ ಕೊಟ್ಟರೆ ನಿಜವಾಗಲೂ ಕೂಡ ಬಹಳ ಪ್ರಯೋಜನವಾಗುತ್ತದೆ ಅಂಥವರಿಗೆ ಆದ್ಯತೆ ಕೊಡಬೇಕೇ ಹೊರತು ಅಧಿಕಾರಿಗಳಿಗೆ ಕೊಡಬಾರದು ಎನ್ನತಕ್ಕಂಥದ್ದು ನನ್ನ ಮನವಿ ದಯಮಾಡಿ ಈ ಬಗ್ಗೆ ತನಿಖೆ ಮಾಡಿಸಿದರೆ ಇದಕ್ಕೆ ಮೂಲ ಕಾರಣ ಅಧಿಕಾರಿಗಳೇ ವಿನಾ ಬೇರೆ ಯಾರೂ ಇಲ್ಲ.

ಶ್ರೀ ಡಿ.ಟಿ. ಜಯಕುಮಾರ್ : ಮಾನ್ಯ ಸದಸ್ಯರು ಹೇಳಿರತಕ್ಕಂಥ ವಿಚಾರ ಬಹಳ ಸಮಂಜಸವಾಗಿದೆ ಏಕೆಂದರೆ ಈ ಸ್ಕೀಮ್ ರೈತರಿಗೇ ತಲುಪಬೇಕಾದುದು ಎನ್ನುವುದು ನಮ್ಮ ಇಲಾಖೆಯ ಮುಖ್ಯ ಉದ್ದೇಶ. ಇದನ್ನು ಯಾರಾದರೂ ಅಧಿಕಾರಿಗಳು ದುರುಪಯೋಗ ಮಾಡಿಕೊಂಡು ತೆಗೆದುಕೊಂಡಿದ್ದರೆ ಅದು ತಪ್ಪಾಗುತ್ತದೆ. ಮತ್ತು ಲಿಸ್ಟ್‌ನಲ್ಲಿ ಸ್ಪೆಸಿಫಿಕ್ ಆಗಿ ನಿಮಗೆ ಕೊಟ್ಟಿದ್ದೇನೆ.

ಅಧ್ಯಕ್ಷರು : ದುರುಪಯೋಗ ಮಾಡುವುದಕ್ಕಾಗುವುದಿಲ್ಲ ಅವರು ಉಪಯೋಗ ಮಾಡತಕ್ಕಂಥದ್ದನ್ನು ಇವರು ಮಾಡಿಕೊಂಡಿರುತ್ತಾರೆ, ದುರುಪಯೋಗ ಹೇಗೆ ಮಾಡುವುದಕ್ಕಾಗುತ್ತದೆ.

ಶ್ರೀ ಡಿ.ಟಿ. ಜಯಕುಮಾರ್ : ಸ್ಪೆಸಿಫಿಕ್ ಆಗಿ ಏನಾದರೂ ಕೂಡ ಅಧಿಕಾರಿಗಳು ದುರುಪಯೋಗ ಮಾಡಿಕೊಂಡುದ್ದು ಅದನ್ನು ನನ್ನ ಗಮನಕ್ಕೆ ತಂದರೆ ಖಂಡಿತ ಅದರ ಬಗ್ಗೆ ತನಿಖೆ ನಡೆಸಿ ಯಾರು ತಪ್ಪಿತಸ್ಥರು ಇದ್ದಾರೆ ಅವರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳುವುದಕ್ಕೆ ಸರ್ಕಾರ ಹಿಂಜರಿಯುವುದಿಲ್ಲ ಎಂಬ ಮಾತನ್ನು ಕೂಡ ಈ ಸಂದರ್ಭದಲ್ಲಿ ಮಾನ್ಯ ಸದಸ್ಯರ ಗಮನಕ್ಕೆ ತರಬಯಸುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ : ಇದರ ಬಗ್ಗೆ ನನಗೆ ಗೊತ್ತಿರತಕ್ಕಂಥ ಒಂದು ಮಾಹಿತಿ ಕೂಡ ಇದೆ, ನೀವು ಚೆಕ್ ಮುಖಾಂತರ ಹಣ ಕೊಡಬೇಕಾದರೆ ಚೆಕ್ಕನ್ನು ಯಾರದೋ ಹೆಸರಿಗೆ ಕೊಟ್ಟು ಯಾರೋ ದುಡ್ಡು ತೆಗೆದುಕೊಂಡಿರತಕ್ಕಂಥ ನಿದರ್ಶನ ಕೂಡ ಉಂಟು. ಇದು ಇಷ್ಟರಮಟ್ಟಿಗೆ ಡೀಪ್ ರೂಟ್ ಆಗಿ ಮೋಸ ಆಗುತ್ತಿರಬೇಕಾದರೆ ದುರುಪಯೋಗ ಅಲ್ಲದಿದ್ದರೂ ಸದುಪಯೋಗವಾಗಿಲ್ಲ. ಆದ್ದರಿಂದ ದಯ ಾಡಿ ತಾವು ಇದರ ಬಗ್ಗೆ ಏನಾದರೂ ಒಂದು ತನಿಖೆ ಮಾಡಿಸುತ್ತೀರಾ? ಹಿಂದೆ

ನೀವು ಹೊಂಬಳ್ಳಿ ಸ್ಕೀಮ್‌ನಲ್ಲಿ ಅನ್ಯಾಯವಾಗಿದೆ ಲಕ್ಷಾಂತರ ರೂಪಾಯಿ ದುರ್ವ್ಯವಹಾರವಾಗಿದೆ ಎಂದು ಹೇಳಿದಾಗ ನೀವು ತನಿಖೆ ಮಾಡಿಸುತ್ತೇನೆಂದು ಹೇಳಿದಿರಿ ತನಿಖೆ ಮಾಡಿಸಿದಿರೋ ಬಿಟ್ಟರೋ ನಮಗಂತೂ ಏನೂ ಗೊತ್ತಾಗಲಿಲ್ಲ. ಆದರೆ ಆ ಸ್ಕೀಮ್ ನಿಂತು ಹೋಯಿತು, ಇದರಿಂದ ಜನಗಳಿಗೆ ಪ್ರಯೋಜನವಾಗಲಿಲ್ಲ. ಈ ರೀತಿ ಆಗುವುದು ಬೇಡ ಆದ್ದರಿಂದ ತಾವು ಇವತ್ತು ತಾವು ಒಂದು ತಿಂಗಳೊಳಗಾಗಿ ತನಿಖೆ ಮಾಡಿಸಿ ಕೊಡುತ್ತೇನೆಂಬ ಮಾತನ್ನಾದರೂ ಹೇಳಿ.

ಶ್ರೀ ಡಿ.ಟಿ. ಜಯಕುಮಾರ್ : ಮೇಲ್ನೋಟಕ್ಕೆ ಆದೇನಾದರೂ ಪ್ರೂವ್ ಆದರೆ ಖಂಡಿತವಾಗಿ ಇದನ್ನು ತನಿಖೆ ಮಾಡಿಸುತ್ತೇವೆ, ಖಂಡಿತ ದುರುಪಯೋಗವಾಗಿದ್ದು ಕಂಡು ಬಂದರೆ ಇದನ್ನು ಪರಿಶೀಲಿಸುತ್ತೇವೆ.

ತಿಪಟೂರು ತಾಲ್ಲೂಕಿಗೆ ಬಸ್ ಡಿಪೋ ಮಂಜೂರಾತಿ.

289 - ಶ್ರೀ ಬಿ. ನಂಜಾಮರಿ (ತಿಪಟೂರು) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ತಿಪಟೂರು ನಗರಕ್ಕೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ ಡಿಪೋ ಈ ಹಿಂದೆ ಮಂಜೂರಾಗಿದ್ದುದು ನಿಜವಲ್ಲವೇ? ಸದರಿ ಬಸ್ ಡಿಪೋ ಪ್ರಾರಂಭಗೊಳ್ಳದಿರಲು ಕಾರಣಗಳೇನು?*

ಆ) *ಕರ್ನಾಟಕ ರಾಜ್ಯದಲ್ಲಿ ಕೊಬ್ಬರಿ ಹಾಗೂ ತೆಂಗಿನ ಕಾಯಿ ಮಾರುಕಟ್ಟೆಗೆ ಪ್ರಸಿದ್ಧವಾಗಿರುವ ತಿಪಟೂರು ನಗರದಲ್ಲಿ ಒಂದು ಬಸ್ ಡಿಪೋ ಪ್ರಾರಂಭಿಸಲು ಈಗಲಾದರೂ ಸರ್ಕಾರವು ಯಾವ ಕ್ರಮ ಕೈಗೊಳ್ಳುವುದೇ?*

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಸಾರಿಗೆ ಸಚಿವರು) :

ಅ) ತಿಪಟೂರಿನಲ್ಲಿ ಬಸ್ ಘಟಕವನ್ನು ಸ್ಥಾಪಿಸಲು ಪ್ರಸ್ತಾಪಿಸಲಾಗಿದೆ. ಆದರೆ ಸದರಿ ಉದ್ದೇಶಕ್ಕಾಗಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ತಿಪಟೂರಿನಲ್ಲಿ ಜಮೀನು ಹೊಂದಿರುವುದಿಲ್ಲ.

ಆ) ಸದರಿ ಉದ್ದೇಶಕ್ಕಾಗಿ ಸರ್ವೆ ಸಂಖ್ಯೆ. 1ರಲ್ಲಿ 12 ಎಕರೆ ಜಮೀನನ್ನು ಸಣ್ಣ ನೀರಾವರಿ ಇಲಾಖೆಯಿಂದ ಪಡೆಯಲು ಕ್ರಮ ಕೈಗೊಳ್ಳಲಾಗಿದ್ದು, ಜಮೀನನ್ನು ಪಡೆದ ನಂತರ ಸಂಪನ್ಮೂಲವನ್ನು ಅವಲಂಬಿಸಿ ಬಸ್ ಘಟಕ ನಿರ್ಮಾಣ ಕೈಗೊಳ್ಳಲಾಗುವುದು.

ಶ್ರೀ ಬಿ.ನಂಜಾಮರಿ : ಮಾನ್ಯ ಅಧ್ಯಕ್ಷರೆ, ಸಚಿವರು ಉತ್ತರದಲ್ಲಿ ಕೊಟ್ಟಿದ್ದಾರೆ, ನಾವು ತಿಪಟೂರು ನಗರಕ್ಕೆ ಒಂದು ಬಸ್ ಡಿಪೋ ಮಂಜೂರಾಗಿದ್ದು, ಇದುವರೆವಿಗೂ ಏಕೆ ಮಂಜೂರಾಗಿಲ್ಲ ಎಂದು ಕೇಳಿದ್ದೇವೆ, ಅದಕ್ಕೆ ಅವರು ತಿಪಟೂರು ಬಸ್‌ಸ್ಟಾಪ್ ಸ್ಥಾಪಿಸಲು ಜಮೀನು ಇಲ್ಲ ಎಂದು ಉತ್ತರ ಕೊಟ್ಟಿದ್ದಾರೆ. ಆದರೆ ತಿಪಟೂರು ಬಸ್ ನಿಲ್ದಾಣದ ಜಾಗದಲ್ಲಿ ಒಂದು ಸಣ್ಣ ಕೆರೆ ಇದೆ, ಆ ಕೆರೆಯಲ್ಲಿ ಸಾಕಷ್ಟು ಜಮೀನೂ ಇದೆ, ಇದನ್ನು ಅವರೇ ತೆಗೆದುಕೊಳ್ಳಬಹುದು, ನನ್ನ ಎರಡನೇ ಪ್ರಶ್ನೆಗೆ 12 ಎಕರೆ ಜಮೀನನ್ನು ನೀರಾವರಿ ಇಲಾಖೆಯಿಂದ ಪಡೆದ ನಂತರ ಕೈಗೊಳ್ಳುತ್ತೇವೆಂದು ಹೇಳಿದ್ದಾರೆ.